# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1094
ಸದಸ್ಯರ ಹೆಸರು : ಶ್ರೀ ಬಿ.ಎಂ. ಫಾರೂಖ್
ಉತ್ತರಿಸಬೇಕಾದ ದಿನಾಂಕ : 14.12.2023 (ವರ್ಗಾವಣೆಗೊಂಡ ಪ್ರಶ್ನೆ)
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರವಾಸಿಗರನ್ನು ಸೆಳೆಯುವಂತಹ ಮಂಗಳ ಕಾರ್ನಿಷ್ ರೋಡ್ ಸ್ಮಾರ್ಟ್ ಸಿಟಿ ಆಗುತ್ತಿರುವ ಮಂಗಳೂರಿಗೆ ವರ್ಷಗಳ ಹಿಂದೆಯೇ ಅನುಮೋದಿಸಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನದಿ ಅಭಿಮುಖ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಮಂಗಳೂರು ಸ್ಥಳೀಯ ಯೋಜನಾ ಪ್ರದೇಶದ 2009 ರ ಮಹಾಯೋಜನೆಯಲ್ಲಿ ಗುರುತಿಲಾಗಿದೆ. ಸದರಿ ನದಿ ಅಭಿಮುಖ ರಸ್ತೆಯನ್ನು "ಮಂಗಳಾ ಕಾರ್ನಿಷ್ ರಸ್ತೆ" ಎಂದು ಕರೆಯಲಾಗುತ್ತಿದ್ದು, ಪಾಲಿಕೆ ವತಿಯಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಇದೂವರೆವಿಗೂ ಯಾವುದೇ ನಿರ್ಣಯ ಕೈಗೊಂಡಿರುವುದಿಲ್ಲ ಹಾಗೂ ಈ ಯೋಜನೆ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಆ) | ಹಾಗಿದ್ದಲ್ಲಿ, ಮಂಗಳ ಕಾರ್ನಿಷ್ ರೋಡ್ ಮಂಗಳೂರಿನಲ್ಲಿ ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು; ಈವರೆಗೆ ಇನ್ನೂ ಬಾಕಿ ಉಳಿದಿರುವುದಕ್ಕೆ ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | |
| ಇ) | ಯೂರೋಪ್ ರಾಷ್ಟ್ರಗಳೇ ಸೇರಿ ಅನೇಕ ದೇಶಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಕಾರ್ನಿಷ್ ರೋಡ್ ಪರಿಕಲ್ಪನೆ ಮಾದರಿಯ ಮಂಗಳೂರಿಗೆ ಬರುವ ಪ್ರವಾಸಿಗರಿಗೆ ಯಾವಾಗ ಲಭ್ಯವಾಗುವುದು; ಮಂಗಳ ಕಾರ್ನಿಷ್ ರೋಡ್ ಕುರಿತ ಯೋಜನಾ ವಿವರ ಅಂಕಿ ಅಂಶಗಳೊಂದಿಗೆ ಮಾಹಿತಿ ನೀಡುವುದು ? | |

**ನಅಇ 68 ಎಂಎಂಸಿ 2023 (ಇ)**

14/12/2023
**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನೆ ಸಚಿವರು